ಕರ್ನಾಟಕ ವಿಧಾನ ಸಭೆ, ಸಂಶೋಧನೆ ಮತ್ತು ಉಲ್ಲೇಖನ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 9/2/2020

ಉದಯ 9/2/20

# ದೆಹಲಿಯಲ್ಲಿ ಕೇಜ್ರಿವಾಲ್?

## ಮತಗಟ್ಟೆ ಸಮೀಕ್ಷೆಯಲ್ಲಿ ಆಪ್‌ಗೆ ಗೆಲುವು

ನವದೆಹಲಿ: ಈ ಬಾರಿಯೂ ರಾಷ್ಟ್ರ ರಾಜಧಾನಿಯಲ್ಲಿ ಆಮ್ ಆದ್ಮಿ ಪಕ್ಷದ ಅರವಿಂದ್ ಕೇಜ್ರಿವಾಲ್ ಜಯದ ಬಾವುಟ ಹಾರಿಸುವುದು ಪಕ್ಕಾ...

ಶನಿವಾರವಷ್ಟೇ ದೆಹಲಿ ವಿಧಾನಸಭೆ ಚುನಾವಣೆ ಅಂತ್ಯವಾಗಿದ್ದು, ಇದರ ಬೆನ್ನಲ್ಲೇ ಮತಗಟ್ಟೆ ಸಮೀಕ್ಷೆಗಳೂ ಹೊರಬಿದ್ದಿವೆ. ಇದರಲ್ಲಿ ಹೆಚ್ಚು ಕಡಿಮೆ ಎಲ್ಲಾ ಚಾನೆಲ್‌ಗಳೂ ಕೇಜ್ರಿವಾಲ್ ಅವರ ಪಕ್ಷಕ್ಕೇ ಸಂಪೂರ್ಣ ಬಹುಮತ ನೀಡಿವೆ. ಆದರೆ ಕಳೆದ ಬಾರಿಯಷ್ಟು ಸ್ಥಾನ ಗೆಲ್ಲದಿದ್ದರೂ 50+ ಸೀಟುಗಳು ಬರುತ್ತವೆ ಎಂದೇ ಈ ಸಮೀಕ್ಷೆಗಳು ಅಭಿಪ್ರಾಯ ವ್ಯಕ್ತಪಡಿಸಿವೆ.

ಅದರಂತೆ, ಪೋಲ್ ಆಫ್ ಪೋಲ್ (ಸಮೀಕ್ಷೆಗಳ ಸಮೀಕ್ಷೆ) ಮಾಡುವುದಾದರೆ ಆಮ್ ಆದ್ಮಿ ಪಕ್ಷಕ್ಕೆ 52, ಬಿಜೆಪಿಗೆ 17 ಮತ್ತು ಕಾಂಗ್ರೆಸ್ 1 ಸ್ಥಾನ ಸಿಗಲಿವೆ. ಒಟ್ಟು 70 ಸಂಖ್ಯಾಬಲದ ದೆಹಲಿ ವಿಧಾನಸಭೆಯಲ್ಲಿ ಬಹುಮತಕ್ಕೆ 36 ಸೀಟು ಸಾಕು. ಆದರೆ, ಮೂರನೇ ಎರಡು ಭಾಗದಷ್ಟು ಸೀಟು ಕೇಜ್ರಿವಾಲ್ ಪಕ್ಷಕ್ಕೆ ಸಿಗಲಿವೆ ಎಂದು ಭವಿಷ್ಯ ನುಡಿದಿವೆ. ಆದರೂ, ಪಕ್ಕಾ ಫಲಿತಾಂಶಕ್ಕಾಗಿ ಫೆ.11ರ ವರೆಗೆ ಕಾಯಲೇಬೇಕು.

2015ರಲ್ಲಿ ನಡೆದಿದ್ದ ವಿಧಾನಸಭೆ ಚುನಾವಣೆಯಲ್ಲಿ ಅರವಿಂದ್ ಕೇಜ್ರಿವಾಲ್ ಅವರ ಪಕ್ಷ ಮೋದಿ ಅಲೆಯನ್ನು ಮೀರಿ 70ರಲ್ಲಿ 67 ಸ್ಥಾನ ಗೆದ್ದು ಇತಿಹಾಸ ನಿರ್ಮಿಸಿತ್ತು. ಈ ಚುನಾವಣೆಯಲ್ಲಿ ಬಿಜೆಪಿ 3 ಸ್ಥಾನ ಮತ್ತು ಕಾಂಗ್ರೆಸ್ ಶೂನ್ಯ ಸಂಪಾದಿಸಿತ್ತು. ಆದರೆ, ನಂತರ ನಡೆದ ದೆಹಲಿಯ ಮೂರು ಮಹಾನಗರ ಪಾಲಿಕೆ ಚುನಾವಣೆ ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಜಯ ಭೇರಿ ಬಾರಿಸಿತ್ತು.




### ಕಾಂಗ್ರೆಸ್‌ಗೆ ಹೊಡೆತ

2015ರಿಂದಲೂ ಒಂದಿಲ್ಲೊಂದು ಹೊಡೆತ ತಿನ್ನುತ್ತಿರುವ ಕಾಂಗ್ರೆಸ್‌ಗೆ ಈ ಬಾರಿಯೂ ಚೇತರಿಕೆ ಸಿಕ್ಕಿಲ್ಲ, ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್ 0-4 ಸ್ಥಾನ ಗೆಲ್ಲುವ ಸಾಧ್ಯತೆ ಇದೆ. ಕೆಲ ಸಮೀಕ್ಷೆಗಳು, ಕಾಂಗ್ರೆಸ್ ಶೂನ್ಯ ಸಂಪಾದಿಸಲಿದೆ ಎಂದು ಹೇಳಿದ್ದರೆ, ಇನ್ನೂ ಕೆಲವು 1 ರಿಂದ 4 ಸ್ಥಾನಗಳ ವರೆಗೆ ಗೆಲ್ಲಬಹುದು ಎಂಬ ಭವಿಷ್ಯ ನುಡಿದಿವೆ.

### ಬಿಜೆಪಿ ಚೇತರಿಕೆ

**2015ರ ವಿಧಾನಸಭೆ ಚುನಾವಣೆ ದೃಷ್ಟಿಯಲ್ಲಿ ಹೇಳುವುದಾದರೆ ಬಿಜೆಪಿಗೆ ಈ ಚುನಾವಣೆಯಲ್ಲಿ ಕೊಂಚ ಮಟ್ಟಿನ ಚೇತರಿಕೆ ಸಿಕ್ಕಿರುವುದು ಕಾಣಿಸುತ್ತಿದೆ. ಆಗ ಕೇವಲ 3 ಸ್ಥಾನಗಳಿಗೆ ತೃಪ್ತಿ ಪಟ್ಟುಕೊಂಡಿದ್ದ ಬಿಜೆಪಿ, ಈ ಬಾರಿ ಡಬಲ್ ಡಿಜಿಟ್ ತಲುಪುವ ಸಾಧ್ಯತೆ ಇದೆ. ಅಂದರೆ 11-21 ಸ್ಥಾನ ಗೆಲ್ಲುವ ಸಾಧ್ಯತೆ ಇದೆ. ಕಳೆದ ಬಾರಿ ಕಿರಣ್ ಬೇಡಿ ಅವರನ್ನು ಸಿಎಂ ಅಭ್ಯರ್ಥಿಯಾಗಿಸಿ ಕಣಕ್ಕಿಳಿಸಿದ್ದ ಬಿಜೆಪಿ, ಈ ಬಾರಿ ಯಾರನ್ನೂ ಘೋಷಿಸಿಲ್ಲ. ನೇರವಾಗಿ ಮೋದಿ ಅವರ ಹೆಸರು ಹೇಳಿಕೊಂಡೇ ಚುನಾವಣೆಯಲ್ಲಿ ಮತಯಾಚನೆ ಮಾಡಿದೆ.**